


## ಉಪಯುಕ್ತ ಲೇಖನ

'ನೀರು ಕುಡಿದರೆ ರೋಗವಿಲ್ಲ', ಡಾ . ವೀಣಾ ಭಟ್ ಅವರ ಮುಖಪುಟ ಲೇಖನ (ಸುಧಾ, ಮೇ. 14) ನೀರು ಕುಡಿಯುವ ಬಗ್ಗೆ, ಆರೋಗ್ಯದ ಬಗ್ಗೆ ಉಪಯುಕ್ತ ಮಾಹಿತಿ ನೀಡಿದೆ. ನೀರಿನ ಮೌಲ್ಯ ಏನೆಂಬುದು ಮನುಷ್ಯನಿಗೆ ಗೊತ್ತಿರದ ಸಂಗತಿ ಮತ್ತು ಅದರಿಂದ ದೊರೆಯುವ ಲಾಭ ಹೆಚ್ಚು. ಒಂದು ಜೀವಕ್ಕೆ ಮುಖ್ಯವಾಗಿ ಬೇಕಾದ ದ್ರವ ನೀರು. ನೀರಿಲ್ಲದ ಜೀವ ನಿರ್ಜೀವ ಎಂದು ಸಾಬೀತುಪಡಿಸಿದ ವೈಜ್ಞಾನಿಕ ನಿಜವನ್ನು ಲೇಖನ ಅನಾವರಣಗೊಳಿಸಿದೆ.

ನೀರು ದೇವರು ನೀಡಿದ ಅಮೂಲ್ಯ ಕೊಡುಗೆ. ಅದು ಹೇಗೆ ಕೆಲಸ ಮಾಡುತ್ತದೆ ಮತ್ತು ದೇಹದ ಪ್ರತಿ ಅಂಗಗಳಲ್ಲಿ ಅದರ ಪ್ರಮಾಣ ಎಷ್ಟು ಎಂದು ತಿಳಿಸಿದ ರೀತಿ ಪ್ರಶಂಸನೀಯ. ಇಂತಹ ಲೇಖನಗಳು ಇನ್ನಷ್ಟು ಬರಲಿ.

– ಅರವಿಂದ್ ಗುಂಡಳ್ಳಿ, ರಾಯಚೂರು, ಡಾ.ಕೆ.ಕೆ. ಜಯಚಂದ್ರಗುಪ್ತ, ಹಾಸನ

## ಆರೋಗ್ಯದ ದೃಷ್ಟಿಯಲ್ಲಿ..

ಜೀವ ಜಲವಾದ ನೀರನ್ನು ಆರೋಗ್ಯ ದೃಷ್ಟಿಯಿಂದ ಯಾವಾಗ, ಎಷ್ಟು ಕುಡಿಯ ಬೇಕು ಎಂಬ ಕುರಿತು ಲೇಖಕಿ ವಿವರವಾದ ಮಾಹಿತಿ ನೀಡಿದ್ದಾರೆ.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ, ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ, ವೈ.ಜಿ.ಎನ್, ಶಿವಮೊಗ್ಗ, ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

## ಬಂದ್ ಯಾವ ಪುರುಷಾರ್ಥಕ್ಕೆ?

'ನಿಮ್ಮೊಡನೆ'ಯಲ್ಲಿ (ಎನ್. ಉದಯಕುಮಾರ್) ತಿಳಿಸಿದ ಅಭಿಪ್ರಾಯ ಸಕಾಲಿಕ. ರಾಜ್ಯ ಬಂದ್‌ಗೆ ಕರೆ ನೀಡಿದಾಗ ಜನತೆ ಪ್ರತಿಕ್ರಿಯಿಸಿ ಓಗೊಡುವ ಕಾರಣ; ತಮ್ಮ ಮಳಿಗೆಗೆ ಕಲ್ಲು ತೂರಬಹುದು, ತಮ್ಮ ವಾಹನಕ್ಕೆ ಬೆಂಕಿ ಇಡಬಹುದು ಎನ್ನುವ ಭಯಕ್ಕೆ ಜನ ಬಂದ್‌ಗೆ ಸ್ಪಂದಿಸುತ್ತಾರೆ ಹೊರತು ಬಂದ್ ಮಾಡಬೇಕು ಎಂಬ ಉದ್ದೇಶಕ್ಕಲ್ಲ. ಇದು ಬಹಿರಂಗ ಸತ್ಯ.

– ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು, ನಾಗೇಶ್ ಕುಮಾರ್ ಸಿ.ಎಸ್. ಚೆನ್ನೈ

## ಮನಮೋಹಕ

'ಮನಮೋಹಕ ಮಲ್ಟ್‌ನೋವಾ' ಮುರಳಿ ಕುಕ್ಕುಪುಣಿ ಅವರ ಅಮೆರಿಕದ ಓರೆಗಾನ್ ಕುರಿತ ಕಥನ ಅತ್ಯಂತ ಮನಮೋಹಕವಾಗಿದೆ. ಪೋರ್ಟ್‌ಲ್ಯಾಂಡ್‌ನಲ್ಲಿರುವ ಮಗಳ ಮನೆಗೆ ಮೂರು ಬಾರಿ ಭೇಟಿ ನೀಡಿದ ನಾನು, ಲೇಖನದಲ್ಲಿ ಸುಂದರವಾದ ಛಾಯಾಚಿತ್ರಗಳೊಂದಿಗೆ ವಿವರಿಸಲ್ಪಟ್ಟ ಎಲ್ಲ ಪ್ರದೇಶಗಳನ್ನು ಹಲವು ಬಾರಿ ಸಂದರ್ಶಿಸಿದ್ದೇನೆ. ಪ್ರವಾಸ ಸಾಹಿತ್ಯಕ್ಕೆ ತಮ್ಮದು ಉತ್ತಮ ಕೊಡುಗೆ.

–ಶ್ರೀಮಾತಾ ಕೆ. ವಿಠಲ್‌ದಾಸ್ ಭಟ್, ಮಣಿಪಾಲ

## ಅರ್ಥಪೂರ್ಣ ವಿಚಾರ ಲಹರಿ

'ವಿಚಾರ ಲಹರಿ'ಯಲ್ಲಿ ಮೂಚಿ ಅವರು ಆಹಾರದ ಆಯ್ಕೆ ಮತ್ತು ಸ್ವಾತಂತ್ರ್ಯದ ಕುರಿತು ಅರ್ಥಪೂರ್ಣವಾಗಿ ವಿವರಿಸಿದ್ದಾರೆ. ಆಹಾರದ ಆಯ್ಕೆಯನ್ನು ತಿನ್ನುವವರಿಗೆ ಬಿಟ್ಟುಬಿಡುವುದು ಒಳ್ಳೆಯದು.

–ವೈ.ಜಿ. ನರಸಿಂಹನ್, ಶಿವಮೊಗ್ಗ

## ಬೆಳಕು ಚೆಲ್ಲಿದೆ

ಎಸ್.ಪಿ. ಶ್ಯಾನುಭಾಗ ಅವರು ಬರೆದ 'ಪೋರ್ನೋಗ್ರಫಿ ಎಂಬ ಪೀಡೆ' ಪ್ರಚಲಿತ ಜ್ವಲಂತ ಸಮಸ್ಯೆ ಬಗ್ಗೆ ಬೆಳಕು ಚೆಲ್ಲಿದೆ.

–ಸುಂದರ್, ಬೆಂಗಳೂರು

## ಮಾರ್ಮಿಕ ಕಥೆ

ಹಾ.ಮ್ಮ. ಸೂರಿ ಅವರ ಕಿರುಕಥೆ 'ನೀಲಿ ಕವರ್' ಮಾರ್ಮಿಕವಾಗಿತ್ತು.

–ಎಸ್. ಪ್ರಭಾ, ಬೆಂಗಳೂರು

## ಕಥೆ ಅಲ್ಲ ವರದಿ

ಯೋಗೇಶ್ ಕಾಂಚನ್ ಅವರ ಕಥೆ 'ಪಶ್ಚಾತ್ತಾಪ' ಓದಿದೆ. ಇದು ಕಥೆ ಅಲ್ಲ ವರದಿ. ಹೆಣ್ಣು ಮಕ್ಕಳಿಗೆ ಕೆಟ್ಟ ಉಪದೇಶ ನೀಡಿದಂತಿದೆ.

–ಕೊಹಿಮ, ಬಸರಕೋಡು

## ರೈತರಿಗೆ ಮಾದರಿ

'ಬದುಕಿಗೆ ದಾರಿ ತೋರಿಸಿದ ತರಕಾರಿ', ವಿಜಯಕುಮಾರ್ ಜೆ. ಅವರ ಲೇಖನ ಸಂತಸ ತಂದಿತು. ರಾಜಶೇಖರ ಅವರು ಇತರ ರೈತರಿಗೆ ಮಾದರಿಯಾಗಿದ್ದಾರೆ.

–ರವೀಂದ್ರನಾಥ ಶಿ. ಯಡಹಳ್ಳಿ

## ಅಮ್ಮನ ನೆನಪುಗಳಿಗೆ ಆಹ್ವಾನ

ಇರುವಾಗ ವಾತ್ಸಲ್ಯದಲ್ಲಿ ತೋಯಿಸುವ ತಾಯಂದಿರು ಅಗಲಿದ ನಂತರ ಮನೆ–ಮನದಲ್ಲಿ ನಿರ್ವಾತ ನಿರ್ಮಿಸುತ್ತಾರೆ. ನೆನಪಾಗಿ ಸದಾ ಕಾಡುತ್ತಾರೆ. ಇಂತಹ ಅಮ್ಮನ ನೆನಪುಗಳನ್ನು ಕೆದಕಿ ಅಕ್ಷರಗಳಲ್ಲಿ ಹಂಚಿಕೊಳ್ಳುವ ಅವಕಾಶವನ್ನು ಅಂಕುರ ಪ್ರಕಾಶನ ಕಲ್ಪಿಸಿದೆ. ಶೀಘ್ರದಲ್ಲೇ ಹೊರ ಬರಲಿರುವ ಅಮ್ಮನ ನೆನಪು ಸಂಕಲನದಲ್ಲಿ ಪ್ರಕಟಿಸಲು ಮೂರು ಪುಟ ವ್ಯಾಪ್ತಿಯ ಆಪ್ತ ಲೇಖನಗಳನ್ನು ಆಹ್ವಾನಿಸಲಾಗಿದೆ. ವಿಳಾಸ: ಚಂದ್ರಕಾಂತ ವಡ್ಡು, ಸಂಪಾದಕ, ಅಂಕುರ ಪ್ರಕಾಶನ, ನಂ. 1148, 1ನೇ ಮಹಡಿ, 2ನೇ ತಿರುವು, ಪಡುವಣ ರಸ್ತೆ, ಟಿ.ಕೆ.ಬಡಾವಣೆ, ಮೈಸೂರು–570023, ದೂರವಾಣಿ: 9448520414



ಶ್ರೀ ಸಾಯಿ ಕೃಪಾ
ಜ್ಯೋತಿಷ್ಯ ಕೇಂದ್ರ

ದಕ್ಷಿಣ ಕನ್ನಡದ ಸುಪ್ರಸಿದ್ಧ ಜ್ಯೋತಿಷ್ಯರು
ಶ್ರೀ ರಾಘವ ದೀಕ್ಷಿತ್
ಶ್ರೀ ರಾಜರಾಜೇಶ್ವರಿ ಉಪಾಸಕರು
ಆರೂಡ ಶಾಸ್ತ್ರ ಜಾತಕ ಆಷ್ಟಮಂಗಲ ಪ್ರಶ್ನೆ ಮೂಲಕ ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ನಿಖರವಾಗಿ ನುಡಿಯುತ್ತಾರೆ
ದಾಂಪತ್ಯ ಕಲಹ, ಮದುವೆ, ಸಂತಾನ, ಸ್ತ್ರೀವಶೀಕರಣ, ಪುರುಷ ವಶೀಕರಣ, ಶತ್ರುನಾಶ, ಸಾಲಭಾದೆ, ಗೃಹಕಲಹ, ಉದ್ಯೋಗದಲ್ಲಿ ಆಡೆತಡೆ, ಮಕ್ಕಳ ಸಮಸ್ಯೆ, ಕುಜದೋಷ, ಲೈಂಗಿಕ,ರಾಜಕೀಯ ಯೋಗ, ಜನವಶ, ವ್ಯಾಪಾರಭಿವೃದ್ಧಿ, ಮಾನಸಿಕ ಚಿಂತೆ, ಅನಾರೋಗ್ಯ, ಮಾಟ-ಮಂತ್ರ ಸಮಸ್ಯೆಗಳಿಗೆ ಕೇರಳದ ಮಂತ್ರದೇವತೆ ಶ್ರೀಕುಟ್ಟಿ ಚೇತನ್ ಭಗವತಿಯ ಅತೀಂದ್ರಿಯ ಪೂಜಾಶಕ್ತಿಯಿಂದ ಹಾಗೂ ವಿದ್ವೇಶಣ ಸ್ತಂಬನ ದಿಗ್ಬಂಧನ ಸಂಮೋಹನ ವಶೀಕರಣದಂತಹ ಬಲಿಷ್ಟ ಪ್ರಯೋಗದ ಮೂಲಕ ನಿಮ್ಮ ಜೀವನದ ಯಾವುದೇ ಘೋರ ನಿಗೂಡ ಗುಪ್ತ ಸಮಸ್ಯೆಗಳಿದ್ದರೂ 3 ದಿನದಲ್ಲಿ
100% ಶಾಶ್ವತವಾಗಿ ಅಂತಿಮ ಪರಿಹಾರ
ಶತಸಿದ್ಧಿ ನಿಮ್ಮ ಎಲ್ಲಾ ವಿಷಯಗಳು ರಹಸ್ಯವಾಗಿರುತ್ತದೆ ಚಿಂತಿಸಬೇಡಿ ಸಂಪರ್ಕಿಸಿ :
ಫೋನಿನ ಮೂಲಕ ವಿವರ ಪಡೆಯಿರಿ
9880855585
ನೀವು ಎಷ್ಟೋ ಜ್ಯೋತಿಷ್ಯರಲ್ಲಿ ದೈವದಲ್ಲಿ ಕಂಡು ಕೇಳಿ ಅಲ್ಲಿ ಇಲ್ಲಿ ಸುತ್ತಾಡಿ ಮನ ನೊಂದಿದರೆ ನಿಮ್ಮ ಸಮಸ್ಯೆಗೆ ಅಂತಿಮ ಪರಿಹಾರಕ್ಕೆ ಒಮ್ಮೆ ಭೇಟಿಕೊಡಿ
ಮನೆ ವಿಳಾಸ: ಮೀರಾ ನಿವಾಸ
ಶ್ರೀ ಸಾಯಿ ಮಂದಿರದ ಎದುರು,
ಶಾಂತಿ ಸಾಗರ್‌ಹೋಟಲ್ ಪಕ್ಕ, ಶೇಷಾದ್ರಿಪುರಂ ಕಾಲೇಜು ಹತ್ತಿರ, ಶೇಷಾದ್ರಿಪುರಂ ಬೆಂಗಳೂರು